Misc.5/2016
PW1

ದಿನಾಂಕ **15.02.2021** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು** ಃ **19** ನೇ ಎದುರುದಾರರ ಪರ ಃ ಶ್ರೀ ಎಸ್ ಹೆಚ್ ಎಂ ವಕೀಲರಿಂದ ಃ

ಮೂಲ ದಾವೆ ಸಂಖ್ಯೆ **1/12** ರಲ್ಲಿ ನಾನು ಮತ್ತು ಇತರರು ಸಲ್ಲಿಸಿದ ರಾಜೀ ಅರ್ಜಿಯನ್ನು ಸಂಪೂರ್ಣವಾಗಿ ಓದಿ ತಿಳಿದುಕೊಂಡಿದ್ದೆ. ಮೂಲ ದಾವೆ ಸಂಖ್ಯೆ **1/12** ರಲ್ಲಿಸಲ್ಲಿಸಿದ ರಾಜೀ ಅರ್ಜಿಯ ಕಂಡಿಕೆ **3, 5** ಮತ್ತು **6** ರಲ್ಲಿ ಕಾಣಿಸಿರುವ ವಿಚಾರ ಸತ್ಯವಾಗಿರುತ್ತದೆ. ಮೂಲ ದಾವೆ ಸಂಖ್ಯೆ **1/12** ರಲ್ಲಿಸಲ್ಲಿಸಿದ ರಾಜೀ ಅರ್ಜಿಯ ಕಂಡಿಕೆ **4** ರಲ್ಲಿ ಕಾಣಿಸಿದ ರೂ.**5,00,000/-** ಮೊತ್ತವನ್ನು **8** ಚೆಕ್ಕುಗಳ ಮೂಲಕ ನಮಗೆ ಪಾವತಿಸಿದ್ದರು ಎಂದರೆ ಸರಿ. ಸದ್ರಿ **8** ಚೆಕ್ಕುಗಳನ್ನು ಮೂಲ ದಾವೆ ಸಂಖ್ಯೆ **1/12** ರ ಪ್ರತಿವಾದಿ **1**(ಬಿ) ರಿಂದ (ಐ) ವರೆಗಿನ ಪಕ್ಷಗಾರರ ವೈಯುಕ್ತಿಕ ಹೆಸರಿನಲ್ಲಿ ಬರೆದು ನೀಡಲಾಗಿತ್ತು ಎಂದರೆ ಸರಿ. ನನ್ನ ಸಹೋದರ ಸಹೋದರಿಯರಿಗೆ ನೀಡಿದ ಚೆಕ್ಕುಗಳನ್ನು ಅವರುಗಳು ಹಾಜರುಪಡಿಸಿ ನಗಧಿಕರಣಪಡಿಸಿಕೊಂಡ ಕುರಿತು ನನಗೆ ಮಾಹಿತಿ ಇಲ್ಲ. ನಾನು ಪ್ರಸ್ತುತ ಪ್ರಕರಣ ದಾಖಲಿಸುವ ಪೂರ್ವದಲ್ಲಿ ನನ್ನ ಸಹೋದರ ಮತ್ತು ಸಹೋದರಿಯರಿಗೆ ನೀಡಿದ ಚೆಕ್ಕುಗಳು ಮಾನ್ಯಗೊಂಡಿದ್ದವೊ ಅಥವಾ ಇಲ್ಲವೊ ಎನ್ನುವ ಕುರಿತು ಅವರುಗಳನ್ನು ಕೇಳಿ ವಿಚಾರಿಸಿರುವುದಿಲ್ಲ. ಆ ರೀತಿ ಅವರುಗಳನ್ನು ಕೇಳಿ ವಿಚಾರಿಸದೆ ಇರಲು ಯಾವುದಾದರೂ ಸಕಾರಣಗಳು ಇವೆಯಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ನನಗೆ ನೀಡಿದ ಚೆಕ್ಕು ಅಮಾನ್ಯಗೊಂಡಿರುತ್ತದೆ ಎಂದು ನುಡಿಯುತ್ತಾರೆ. ನನ್ನ ಸಹೋದರ ಮತ್ತು ಸಹೋದರಿಯರ ಹೆಸರಿಗೆ ನೀಡಿದ ಚೆಕ್ಕುಗಳು ಮಾನ್ಯಗೊಂಡು ಹಣವನ್ನು ಪಡೆದುಕೊಂಡಿದ್ದು ಮತ್ತು ಸದ್ರಿ ವಿಚಾರಗಳು ನನಗೆ ತಿಳಿದಿದ್ದರೂ ಆ ರೀತಿ ತಿಳಿದಿರುವುದಿಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**2.** ನನ್ನ ತಂದೆ ಶೀನಪ್ಪ ಶೆಟ್ಟಿಯವರ ದಾವಾ ಆಸ್ತಿಯ ಹಿಸ್ಸೆಯ ಕುರಿತು ಅವರ ಮರಣ ನಂತರ ನನಗೆ ಮತ್ತು ನನ್ನ ಸಹೋದರ ಸಹೋದರಿಯರಿಗೆ ಜಂಟಿಯಾಗಿ ರೂ.**5,00,000/-** ಗಳನ್ನು ನೀಡಿದ್ದರು ಎಂದರೆ ಸರಿ. ದಿ:**26.10.2014** ರಂದು ನಿಪಿ-**10** ಚೆಕ್ಕನ್ನು ನಗಧಿಕರಿಸಲು ಬ್ಯಾಂಕ್ ಗೆ ಹಾಜರುಪಡಿಸಿರುತ್ತೇನೆ. ಆ ರೀತಿ ಹಾಜರುಪಡಿಸಿದ ನಂತರ ಚೆಕ್ಕು ಅಮಾನ್ಯಗೊಂಡಿರುತ್ತದೆ. ಆ ರೀತಿ ಚೆಕ್ಕು ಅಮ್ಯಾಗೊಂಡಿದೆ ಎಂದು ತೋರಿಸುವ ಕುರಿತು ದಾಖಲೆಗಳು ಇವೆ ಮತ್ತು ಅವುಗಳನ್ನು

ಹಾಜರುಡಿಸಲು ನನಗೆ ಯಾವುದೇ ಅಭ್ಯಂತರವಿಲ್ಲ. ನಿಪಿ-**10** ನ್ನು **2** ಬಾರಿ ನಗಧೀಕರಿಸಲು ಹಾಜರುಪಡಿಸಿರುತ್ತೇನೆ. ಅ ರೀತಿ **2** ನೇ ಬಾರಿ ಹಾಜರುಪಡಿಸಿದ ದಿನಾಂಕ ನನಗೆ ನೆನಪಿಲ್ಲ. ಆ ರೀತಿ ನಿಪಿ-**10** ಚೆಕ್ಕನ್ನು ದಿಃ**26.10.2014** ರ ನಂತರ ಹಾಜರುಪಡಿಸಿರುತ್ತೇನೆ. ನಿಪಿ-**10** ಚೆಕ್ಕನ್ನು ಊರ್ವ ಮಾರ್ಕೆಟ್ ಶಾಖೆಯ ಕೆನರಾ ಬ್ಯಾಂಕ್ **2** ಬಾರಿ ಹಾಜರುಪಡಿಸಿರುತ್ತೇನೆ. ಆ ರೀತಿ ನಿಪಿ-**10** ನ್ನು **2** ನೇ ಬಾರಿ ಹಾಜರುಪಡಿಸಿದಾಗಲೂ ಅಮಾನ್ಯಗೊಂಡಿರುತ್ತದೆ. ಆ ರೀತಿ **2** ನೇ ಬಾರಿಯು ನಿಪಿ-**10** ಚೆಕ್ಕು ಅಮಾನ್ಯಗೊಂಡಿತ್ತು ಎನ್ನುವ ಕುರಿತು ನನ್ನ ಬಳಿ ದಾಖಲೆಗಳು ಇವೆ ಮತ್ತು ಅವುಗಳನ್ನು ಹಾಜರುಪಡಿಸಲು ನನಗೆ ಯಾವುದೇ ಅಭ್ಯಂತರವಿಲ್ಲ. ನಾನು ನಿಪಿ-**10** ಚೆಕ್ಕನ್ನು ನಗಧೀಕರಿಸಲು ಬ್ಯಾಂಕ್ ಗೆ ಹಾಜರುಪಡಿಸಿರುವುದಿಲ್ಲ ಮತ್ತು ಹಾಜರುಪಡಿಸಿದ್ದೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**3.** ನಿಪಿ-**11** ರಲ್ಲ ಕಾಣಿಸಿರುವ ವಿಚಾರಗಳು ಸರಿ ಇರುತ್ತವೆ. ನಿಪಿ-**11** ರಂತೆ ಪಿರ್ಯಾದು ನೀಡಿದ ನಂತರ ವಿಶ್ವನಾಥ್ ಶೆಟ್ಟಿಯವರನ್ನು ಠಾಣೆಗೆ ಕರೆಸಿರುತ್ತಾರೆ. ಆ ರೀತಿ ವಿಶ್ವನಾಥ್ ಶೆಟ್ಟಿಯವರನ್ನು ಠಾಣೆಗೆ ಕರೆಸಿ ವಿಚಾರಣೆ ಮಾಡಿ ಹೇಳಿಕೆಯನ್ನು ಪಡೆದುಕೊಂಡು ನಿಪಿ-**13** ರಂತೆ ಹಿಂಬರಹವನ್ನು ನೀಡಿರುತ್ತಾರೆ ಎಂದರೆ ಸರಿ. ನಿಪಿ-**13** ರಲ್ಲಿ ಕಾಣಿಸಿರುವ ವಿಚಾರಗಳು ಸರಿ ಇರುತ್ತವೆ. ನಿಪಿ-**11** ಪಿರ್ಯಾದು ನೀಡಿದ ನಂತರ ನಿಪಿ-**10** ಚೆಕ್ಕನ್ನು ಪುನಃ ನಗಧೀಕರಿಸಲು ಬ್ಯಾಂಕ್ ಗೆ ಹಾಜರುಪಡಿಸಿರುವುದಿಲ್ಲ. ನಾನು ನಿಪಿ-**10** ಚೆಕ್ಕನ್ನು ನಗಧೀಕರಿಸಲು ಬ್ಯಾಂಕ್ ಗೆ ಯಾವತ್ತು ಹಾಜರುಪಡಿಸಿರುವುದಿಲ್ಲ ಮತ್ತು ನಿಪಿ-**10** ಚೆಕ್ಕು ಅಮಾನ್ಯಗೊಂಡಿರುತ್ತದೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-**10** ಚೆಕ್ಕು ಅಮಾನ್ಯಗೊಂಡಿದ್ದೆ ಎಂದು ಹೇಳುವ ನಂತರ ವಿಶ್ವನಾಥ ಶೆಟ್ಟಿಯವರ ವಿರುದ್ದ ಎನ್ ಐ ಆ್ಯಕ್ಟ್ ಅಡಿಯಲ್ಲಿ ಪ್ರಕರಣ ದಾಖಲಿಸಿರುವುದಿಲ್ಲ.

ಮುಂದುವರಿದ ಪಾಟೀ ಸವಾಲಿಗೆ ಸಮಯ ಕೋರಿದ್ದು ಮುಂದೂಡಲಾಯಿತು.

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಎ.ಹೆ.ಸಿ.ನ್ಯಾ ಮತ್ತು ಪ್ರ ದ ನ್ಯಾ ದಂ,
ಕಾರ್ಕಳ